## ನಾನೂ ಅಷ್ಟೇ!

ಮದುವೆಯಾದ ಮರುದಿನವೇ ಗಂಡ–ಹೆಂಡತಿ ಹೊಸ ಕಾರಿನಲ್ಲಿ ಪ್ರಯಾಣಕ್ಕೆ ಹೊರಟಿದ್ದರು. ಮಾತುಗಳ ಮಧ್ಯೆ ಗಂಡ, ಹೆಂಡತಿಗೆ 'ನಿನಗೆ ಅಡುಗೆ ಮಾಡಲು ಬರುತ್ತಾ' ಎಂದು ಕೇಳಿದ.

ಆಗ ಹೆಂಡತಿ, 'ಬರಲ್ಲ. ಆದರೆ, ಯುಟ್ಯೂಬ್ ನೋಡಿಕೊಂಡು ಅಡುಗೆ ಮಾಡುತ್ತೇನೆ' ಎಂದಳು.

ಆಗ ಗಂಡ 'ನಾನೂ ಅಷ್ಟೇ. ನನಗೂ ಕಾರ್ ಡ್ರೈವಿಂಗ್ ಬರಲ್ಲ. ಆದರೆ, ಯೂ ಟ್ಯೂಬ್ ನೋಡಿಕೊಂಡೇ ಡ್ರೈವ್ ಮಾಡ್ತಾ ಇರೋದು' ಎಂದ.

ಗಂಡನ ಮಾತು ಕೇಳಿ ಸುಸ್ತಾಗುವ ಸರದಿ ಹೆಂಡತಿಯದ್ದಾಗಿತ್ತು.

**ವಿ. ಹೇಮಂತ ಕುಮಾರ**






## ಗುಂಡನ ಲೆಕ್ಕಾಚಾರ

ಕಲಿಕೆಯಲ್ಲಿ ಹಿಂದುಳಿದಿದ್ದ ಗುಂಡನಿಗೆ ಟೀಚರ್ ಗಣಿತದ ಲೆಕ್ಕ ಕಲಿಸಿದ್ದರು. ಅದನ್ನು ಪರೀಕ್ಷೆ ಮಾಡಲೆಂದೇ 'ಗುಂಡಾ, ಎರಡರಲ್ಲಿ ಎರಡು ಕಳೆದರೆ ಎಷ್ಟು' ಎಂದು ಪ್ರಶ್ನಿಸಿದರು. ಆಗ ಗುಂಡ 'ನಾಲ್ಕು' ಎಂದು ಉತ್ತರಿಸಿದ. ಆತನ ಉತ್ತರ ಕೇಳಿ ಸಿಟ್ಟಿಗೆದ್ದ ಟೀಚರ್ ತಾಳ್ಮೆಯಿಂದ ಮತ್ತೊಮ್ಮೆ 'ಸರಿಯಾಗಿ ಕೇಳಿಸಿಕೋ... ನಿನ್ನ ಹತ್ತಿರ ಎರಡು ಚಾಕಲೇಟ್ ಇದೆ. ನೀನು ಎರಡೂ ಚಾಕಲೇಟ್ ತಿಂದು ಬಿಡ್ತೀಯಾ. ಅಗ ನಿನ್ನ ಬಳಿ ಏನು ಉಳಿಯಿತು?' ಎಂದು ಮರುಪ್ರಶ್ನಿಸಿದರು.

ಆಗ ಗುಂಡಾ ಆತ್ಮವಿಶ್ವಾಸದಿಂದ 'ಚಾಕಲೇಟ್ ಪೇಪರ್' ಎಂದು ಉತ್ತರಿಸಿದ. ಇದನ್ನು ಕೇಳಿ ಟೀಚರ್ ಸುಸ್ತು!

**ಕೆ.ವಿ.ರಾಜಲಕ್ಷ್ಮಿ**

**ಕಲೆ: ಗಣೇಶ ಆಚಾರ್ಯ**